ದಿಃ 21-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

| | | |
|---|---|---|
| ಹೆಸರು | ಃ | ರವಿ ಯಲ್ಲಪ್ಪ ಪಟ್ಟಿಹಾಳ |
| ತಂದೆಯ ಹೆಸರು | ಃ | ಯಲ್ಲಪ್ಪ |
| ವಯಸ್ಸು | ಃ | 43 ವರ್ಷ |
| ಉದ್ಯೋಗ | ಃ | ಎಫ್ ಡಿ ಎ, ಟಿ ಎಮ್ ಸಿ, ಹಳಿಯಾಳ |
| ವಾಸಸ್ಥಳ | ಃ | ಹಳಿಯಾಳ. |

**ಮುಖ್ಯ ವಿಚಾರಣೆ** : ನ್ಯಾಯಾಲಯದ ತರ್ಫಿಃ

ಈ ದಿನ ನಾನು ನ್ಯಾಯಾಲಯದ ಸಮನ್ಸ ಬಂದಿದ್ದರಿಂದ ಬಂದಿರುತ್ತೇನೆ. ಮುಖ್ಯಾಧಿಕಾರಿ ಪುರಸಭೆ ಹಳಿಯಾಳ ರವರು ನನಗೆ ಈ ದಾವೆಯಲ್ಲಿ ದಾಖಲೆಗಳನ್ನು ಹಾಜರುಪಡಿಸಲು ಮತ್ತು ಸಾಕ್ಷ್ಯ ನುಡಿಯಲು ನಿಯೋಜಿಸಿರುತ್ತಾರೆ. ಸದರಿ ನಿಯೋಜನಾ ಪತ್ರವನ್ನು **ನಿಸಿ 1 ಎಂದು** ಗುರುತಿಸಲಾಯಿತು.

ಸಾಕ್ಷಿಯು ಆಸ್ತಿ ತೆರಿಗೆ ಬೇಡಿಕೆ, ಸಂಗ್ರಹಣೆ, ಬಾಕಿ ಹಾಗೂ ನಮೂನೆ-3 ರನ್ನೊಳಗೊಂಡ 2025-26 ರ ರಜಿಸ್ಟರ ನ ಪುಟ ಸಂಖ್ಯೆ 39 ರ ದೃಢಿಕೃತ ನಕಲನ್ನು ಮತ್ತು ಮೂಲ ರಜಿಸ್ಟರ್ ಅನ್ನು ಹಾಜರುಪಡಿಸಿದ್ದು ದೃಢಿಕೃತ ನಕಲನ್ನು ಮೂಲ ರಜಿಸ್ಟರನೊಂದಿಗೆ ಹೋಲಿಕೆ ಮಾಡಿ ನೋಡಿ ಸದರಿ ದಾಖಲೆಯನ್ನು **ನಿಸಿ 2 ಎಂದು** ಮತ್ತು ಅದರೊಂದಿಗಿನ ಸಿ ಟಿ ಎಸ್ ಉತಾರ **ನಿಸಿ 3 ಎಂದು** ಮತ್ತು ನಕ್ಷೆಯನ್ನು **ನಿಸಿ 4 ಎಂದು** ಗುರುತಿಸಲಾಯಿತು.

**ಪಾಟೀ ಸವಾಲುಃ** ಶ್ರೀ ಡಿ ಕೆ ಜೆ ವಕೀಲರಿಂದ.

ನಾನು ಬಿ ಎ ಪದವಿ ಪಡೆದಿದ್ದೇನೆ. ನಾನು ಟಿ ಎಮ್ ಸಿ, ಹಳಿಯಾಳದ ತೆರಿಗೆ ವಿಭಾಗದಲ್ಲಿ ಎಫ್ ಡಿ ಎ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ. ತೆರಿಗೆ ವಿಭಾಗದಲ್ಲಿ ನಾನು 2024 ರ ನವಂಬರ ನಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ನೀವು ಹಾಜರುಪಡಿಸಿದ ರಿಜಿಸ್ಟರನ್ನು ನೋಡಿಕೊಂಡು ಬಂದಿದ್ದೀರಿ ಎಂದರೆ ಸರಿ. ಸಿ ಟಸ ಎಸ್ ನಂಬರ 2773 ಚರ್ಚ ರಸ್ತೆಯಲ್ಲಿ

ಇದೆ ಎಂದರೆ ಸರಿ. ಸದರಿ ಆಸ್ತಿಯನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎನ್ನುತ್ತಾರೆ. ನಿಡಿ 8 ಅನ್ನು ಯಾರು ಯಾರಿಗೆ ಬರೆದುಕೊಟ್ಟಿದ್ದಾರೆ ಎಂದರನಿ ಸಾಕ್ಷಿ ಅದನ್ನು ಪರಿಶೀಲಿಸಿ ಮೊದಲು ಸಿ ಟಿ ಎಸ್ ನಂಬರ 2773 ಟಿ ಎಮ್ ಸಿ ಗೆ ಸೇರಿತ್ತು, ಮುಖ್ಯಾಧಿಕಾರಿ ರವರು ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. ಸಿ ಟಿ ಎಸ್ ನಂಬರ 2773 ರಲ್ಲಿ ಸಣ್ಣ ಅಂಗಡಿ ಇದ್ದು ಅದರ ವಿಸ್ತೀರ್ಣ 15 ಉದ್ದ 12 ಅಗಲ ಇದೆ ಎಂದರೆ ಸರಿ. ವಾದಿ ನಿಮಗೆ ಪರಿಚಯವೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಿನಾಂಕ 20-02-1984 ರಂದು ಪ್ರತಿವಾದಿ ರವರ ಹೆಸರಿನಲ್ಲಿ ಮಾತ್ರ ಖರೀದಿ ಪತ್ರ ಆಗಿದ್ದು, ಆ ಪ್ರಕಾರ ತೆರಿಗೆ ರಜಿಸ್ಟರ ನಲ್ಲಿ ನಮೂದಾಗಿ ದೆಯೇ ಎಂದರೆ ಸಾಕ್ಷಿ ನಮೂದು ಆಗಿದೆ ಎನ್ನುತ್ತಾರೆ. ಪ್ರತಿವಾದಿಯ ಹೆಸರು ನಮೂದಾದ ರಜಿಸ್ಟರನ್ನು ತೋರಿಸಿದ್ದೀರಾ ಎಂದರೆ ಸಾಕ್ಷಿ ತೋರಿಸುತ್ತೇನೆ ಎನ್ನುತ್ತಾರೆ. ಆಸ್ತಿ ತೆರಿಗೆ ಬೇಡಿಕೆ, ಸಂಗ್ರಹಣೆ, ಬಾಕಿ ಹಾಗೂ ನಮೂನೆ-3 ರನ್ನೊಳಗೊಂಡ 2025-26 ರ ರಜಿಸ್ಟರ ನ ಪುಟ ಸಂಖ್ಯೆ 39 ತೋರಿಸಿ ಅದರಲ್ಲಿ ನಮೂದು ಆಗಿದೆ ಎನ್ನುತ್ತಾರೆ. ಅದರಲ್ಲಿ ಪ್ರತಿವಾದಿ ರವರ ಹೆಸರು ಮಾತ್ರ ನಮೂದಾಗಿದೆಯೇ ಎಂದರೆ ಸಾಕ್ಷಿ ಮೊದಲನೇಯದಾಗಿ ಅಬ್ದುಲ್ ಅಜೀಜ್ ಮೊದೀನಸಾಬ ದಲಾಲ್ ಮತ್ತು ಎರಡನೇಯದಾಗಿ ಅಬ್ದುಲ್ ಶಿಕೂರ ಮೊದೀನಸಾಬ ದಲಾಲ್ ರವರ ಹೆಸರು ನಮೂದು ಆಗಿದೆ ಎನ್ನುತ್ತಾರೆ. ಖರೀದಿ ಪತ್ರ ಕೇವಲ ಅಬ್ದುಲ್ ಶಿಕೂರ ಮೊದೀನಸಾಬ ದಲಾಲ್ ರವರ ಹೆಸರಿನಲ್ಲಿ ಮಾತ್ರ ಆಗಿದ್ದು, ವಾದಿಯ ಹೆಸರು ಹೇಗೆ ನಮೂದಾಗಿದೆ ಎಂದರೆ ಸಾಕ್ಷಿ ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಆಸ್ತಿ ತೆರಿಗೆ ರಜಿಸ್ಟರ ನಲ್ಲಿ ಯಾವ ಆಧಾರದ ಮೇಲೆ ಹೆಸರು ನಮೂದು ಮಾಡುತ್ತೀರಿ ಎಂದರೆ ಸಾಕ್ಷಿ ಸಿ ಟಿ ಎಸ್ ಉತಾರದ ಆಧಾರದ ಮೇಲೆ ನಮೂದಿಸುತ್ತೇವೆ ಎನ್ನುತ್ತಾರೆ. ಒಬ್ಬರ ಹೆಸರು ಈಗಾಗಲೇ ನಮೂದಾಗಿದ್ದು, ಇನ್ನೊಬ್ಬರ ಹೆಸರು ನಮೂದಿಸಬೇಕಾದರೆ ಯಾವ ಪ್ರಕ್ರಿಯೆ ಪಾಲಿಸುತ್ತೀರಿ ಎಂದರೆ ಸಾಕ್ಷಿ ಯಾರ ಹೆಸರು ನಮೂದಾಗಿರುತ್ತದೆಯೋ ಅವರ ಒಪ್ಪಿಗೆ ಪಡೆದು ಹೆಸರು ನಮೂದಿಸಿಕೊಳ್ಳುವವರು ಸಿ ಟಿ ಎಸ್ ಉತಾರದಲ್ಲಿ ಹೆಸರು ನಮೂದಿಸಿಕೊಂಡಿದ್ದರೆ ಆ ಪ್ರಕಾರ ನಾವು ತೆರಿಗೆ ರಜಿಸ್ಟರ ನಲ್ಲಿ ನಮೂದಿಸುತ್ತೇವೆ ಎನ್ನುತ್ತಾರೆ. ಆ ರೀತಿ ರಜಿಸ್ಟರ ನಲ್ಲಿ ನಮೂದಿಸುವ ಮೊದಲು ಆಸ್ತಿ ತೆರಿಗೆ ರಜಿಸ್ಟರ ನಲ್ಲಿ ಈಗಾಗಲೇ ನಮೂದು ಆದವರಿಗೆ ನೋಟೀಸ ಕೊಡಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ಹಿಂದೆ ಇದ್ದವರು ನೋಟೀಸ ಕೊಟ್ಟಿದ್ದಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಮೂಲ ಆಸ್ತಿ ತೆರಿಗೆ ರಜಿಸ್ಟರನ ಪ್ರಕಾರ ಮೊದಲು ಅಬ್ದುಲ್ ಶಿಕೂರ್ ಮೊದಿನಸಾಬ ದಲಾಲ್ ರವರ ಹೆಸರು

ನಮೂದಿಸಲಾಗಿತ್ತು, ನಂತರ ಅದಕ್ಕೆ ವೈಟನರ್ ಹಚ್ಚಿ ಅಬ್ದುಲ್ ಅಜೀಜ್ ಮೊದಿನಸಾಬ ದಲಾಲ್ ರವರ ಹೆಸರನ್ನು ನಮೂದಿಸಲಾಗಿದೆ ಎಂದರೆ ಸರಿ. ಸದರಿ ರಜಿಸ್ಟರ ನಲ್ಲಿ ಸಾಕಷ್ಟು ಕಡೆಗಳಲ್ಲಿ ವೈಟನರ್ ಹಚ್ಚಿ ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ.

(ನ್ಯಾಯಾಲಯವು ಮೂಲ ರಜಿಸ್ಟರ ಅನ್ನು ಪರಿಶೀಲಿಸಿದಾಗ ಆ ರೀತಿ ತಿದ್ದುಪಡಿ ಮಾಡಿರುವುದು ಕಂಡು ಬಂದಿರುತ್ತದೆ.)

ರಜಿಸ್ಟರ ನಲ್ಲಿ ಒಬ್ಬರ ಹೆಸರು ತೆಗೆದು ಇನ್ನೊಬ್ಬರ ಹೆಸರು ನಮೂದಿಸಲು ನಿಮ್ಮ ಮೇಲಾಧಿಕಾರಿಗಳ ಆದೇಶ ಇರಬೇಕು ಎಂದರೆ ಸರಿ. ಕೆಲವೊಮ್ಮೆ ಚುನಾಯಿತ ಸದಸ್ಯರು ಠರಾವು ಪಾಸ್ ಮಾಡಿದರೆ ಹೆಸರನ್ನು ನಮೂದಿಸುತ್ತೀರಿ ಎಂದರೆ ಸರಿ. ಮೂಲ ರಜಿಸ್ಟರ ನಲ್ಲಿ ತಿದ್ದುಪಡಿ ಮಾಡಿದ ಜಾಗದಲ್ಲಿ ಯಾವುದೇ ಷರಾ ಇರುವುದಿಲ್ಲ ಎಂದರೆ ಸರಿ. ಅಬ್ದುಲ್ ಶಿಕೂರ್ ಮೊದಿನಸಾಬ ದಲಾಲ್ ರವರ ಹೆಸರನ್ನು 1984 ರಲ್ಲಿ ನಮೂದಿಸಿದಾಗ ಆ ಅಂಗಡಿಗೆ ಯಾವ ಸಂಖ್ಯೆಯನ್ನು ಕೊಡಲಾಗಿತ್ತು ಎಂದರೆ ಸಾಕ್ಷಿ 643 ಅನ್ನು ಕೊಡಲಾಗಿತ್ತು ಎನ್ನುತ್ತಾರೆ. ರಜಿಸ್ಟರನ ಪ್ರಕಾರ ಈಗಲೂ ಸಹ ಅಬ್ದುಲ್ ಶಿಕೂರ್ ಮೊದಿನಸಾಬ ದಲಾಲ್ ರವರಿಗೆ 643 ಸಂಖ್ಯೆಯನ್ನು ಕೊಡಲಾಗಿದೆ. ಅಬ್ದುಲ್ ಶಿಕೂರ್ ಮೊದಿನಸಾಬ ದಲಾಲ್ ಎಂದು ಬರೆದ ಹೆಸರನ್ನು ವೈಟನರ್ ನಿಂದ ಅಳಿಸಿ ಅಬ್ದುಲ್ ಅಜೀಜ್ ಮೊದಿನಸಾಬ ದಲಾಲ್ ಎಂದು ಬರೆದು ಅದರ ಮೇಲೆ ಸಂಖ್ಯೆ 643 ರ ಮೇಲೆ 642 ಎಂದು ಬರೆಯಲಾಗಿದೆ ಎಂದರೆ ಸರಿ. ರಜಿಸ್ಟರ ನ ಪ್ರಕಾರ ಮೇಲೆ ಬರೆದ 642 ಸಂಖ್ಯೆಗೂ ಸಹ ಈಗ ವೈಟನರ್ ಹಚ್ಚಲಾಗಿದೆ ಎಂದರೆ ಸರಿ. 642 ಅನ್ನು ನಂತರದಲ್ಲಿ ಸೇರಿಸಿರುವುದು ಮತ್ತು ವೈಟನರ್ ಹಾಕಿರುವುದು ಕಾಣಿಸುತ್ತದೆ ಎಂದರೆ ಸರಿ.

**ನ್ಯಾಯಾಲಯದ ಟಿಪ್ಪಣಿ ಃ** ಈಗ ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ.)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾದಂ., ಹಳಿಯಾಳ.

ದಿನಾಂಕ 21-08-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಶ್ರೀ ಡಿ ಕೆ ಜೆ ವಕೀಲರಿಂದ.

ದಾವಾ ಸ್ವತ್ತಿನ ಸಂಖ್ಯೆ 2773 ಇದ್ದು, ಸಿಟಿ ಎಸ್ ಉತಾರದಲ್ಲಿ ವಿಭಾಗಗಳಾಗಿ ಹಿಸ್ಸೆ 1 ಮತ್ತು 2 ಎಂದು ಆಗಿವೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆಸ್ತಿಯ ಕುರಿತು ಕರ ತುಂಬಿದ ಬಗ್ಗೆ ತೆರಿಗೆ ರಜಿಸ್ಟರನ್ನು ಹೊರತುಪಡಿಸಿ ಬೇರೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ತೆರಿಗೆ ರಜಿಸ್ಟರ ನಲ್ಲಿ ವಾದಿ ತಮ್ಮ ಹೆಸರು ಹಚ್ಚಲು ಅರ್ಜಿ ಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿವಾದಿ ರವರು ವಾದಿಯ ಹೆಸರು ನಮೂದಿಸಲು ಒಪ್ಪಿಗೆ ಕೊಟ್ಟ ಬಗ್ಗೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 2018 ರಿಂದ ಗಣಕಯಂತ್ರ ತೆರಿಗೆ ರಸೀದಿಗಳನ್ನು ನೀಡುತ್ತಿದ್ದೇವೆ. ವಾದಿಗೆ ನೀಡಿದ ತೆರಿಗೆ ಪಾವತಿ ರಸೀದಿಗಳನ್ನು ಕೈಯಿಂದ ಬರೆದವುಗಳು ಆಗಿವೆ ಎಂದರೆ ಸರಿ. ಸಿ ಟಿ ಎಸ್ ನಂಬರ 2773 ರಲ್ಲಿ 15 ಅಡಿ ಉದ್ದ 12 ಅಡಿ ಅಗಲ ಇದ್ದು, ಅದು ಒಂದೇ ಸ್ವತ್ತು ಎಂದರೆ ಸರಿ. ಆಸ್ತಿ ತೆರಿಗೆ ರಜಿಸ್ಟರನ್ನು ನಿಭಾಯಿಸಲು ನೀವು ಜಾಗಕ್ಕೆ ಹೋಗಿ ಪರಿಶೀಲನೆ ನಡೆಸಬೇಕಾಗುತ್ತದೆ ಎಂದರೆ ಸರಿ. ಹಳಿಯಾಳದ ಭಜಂತ್ರಿಗಲ್ಲಿಯ ವಾರ್ಡ ನಂಬರ ಎಷ್ಟು ಎಂದರೆ ಸಾಕ್ಷಿ 12 ಅಥವಾ 13 ಇರಬಹುದು ಎನ್ನುತ್ತಾರೆ. ಭಜಂತ್ರಿಗಲ್ಲಿಯಲ್ಲಿರುವ ಮಹಮ್ಮದ ರಫೀಕ್ ಮಹಮ್ಮದಗೌಸ ಬಸರಿಕಟ್ಟಿ ರವರ ಪರಿಚಯ ಇದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈ ಹಿಂದೆ ಪುರಸಭೆಯ ಅಧ್ಯಕ್ಷರಾಗಿ ಅಜರುದ್ದಿನ್ ಎಮ್ ಬಸರಿಕಟ್ಟಿರವರು ಇದ್ದರು. ಅವರ ಪರಿಚಯ ಇದೆ. ಅವರ ಕಾಕಾ ಇಮ್ತಿಯಾಜ್ ರವರು ಈ ದಾವೆಯಲ್ಲಿ ಸಾಕ್ಷ್ಯ ನುಡಿದಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನಗೆ ವಾದಿಯ ಮತ್ತು ಪ್ರತಿವಾದಿಯ ಪರಿಚಯ ಇದೆ ಎಂದರೆ ಸರಿಯಲ್ಲ. ವಾದಿಗೆ ಅನುಕೂಲ ಮಾಡಲು ಅವರ ಮಾತು ಕೇಳಿ ನೀವು ಆಸ್ತಿ ತೆರಿಗೆ ರಜಿಸ್ಟರನ್ನು ತಿದ್ದಿದ್ದೀರಿ ಎಂದರೆ ಸರಿಯಲ್ಲ. ಆಸ್ತಿ ತೆರಿಗೆ ರಜಿಸ್ಟರನ್ನು ಕಾನೂನು ಬಾಹಿರವಾಗಿ ತಿದ್ದುಪಡಿ ಮಾಡಿರುವುದರಿಂದ ವಾದಿ ಈ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಹಿಂದಿನ ರಜಿಸ್ಟರನ್ನು ಏಕೆ ತಂದಿಲ್ಲ ಎಂದರೆ ಸಾಕ್ಷಿ ನೋಡಿ ಹೇಳಬೇಕಾಗುತ್ತದೆ ಎನ್ನುತ್ತಾರೆ. 2024 ರ ನವಂಬರ ತಿಂಗಳಲ್ಲಿ ನಾನು ನನ್ನ ವಿಭಾಗದ ಕರ್ತವ್ಯವನ್ನು ವಹಿಸಿಕೊಂಡಿರುತ್ತೇನೆ. ಸಾಕ್ಷಿಗೆ ಪ್ರತಿವಾದಿ ಪುರಸಭೆಗೆ ನೀಡಿದ ಪತ್ರದ ಸ್ವೀಕೃತಿ ಪ್ರತಿಯನ್ನು ತೋರಿಸಿ ಅದನ್ನು ನಿಮ್ಮ ಕಚೇರಿಯಲ್ಲಿ ಸ್ವೀಕರಿಸಲಾಗಿದೆ ಎಂದರೆ ಸಾಕ್ಷಿ ಟಪಾಲು ವಿಭಾಗದ ಬಸವರಾಜ ಚಲವಾದಿ ರವರು ಸ್ವೀಕರಿಸಿದ್ದಾರೆ ಎನ್ನುತ್ತಾರೆ. ಸಾಕ್ಷಿಗ ಒಪ್ಪಿಕೊಂಡ ಮೇರೆಗೆ **ನಿಡಿ 22 ಎಂದು** ಗುರುತಿಸಲಾಯಿತು.

ನಿಡಿ 19 ರ ಪ್ರಕಾರ ಹಾಜರುಪಡಿಸಿದ ದಾಖಲೆಯಲ್ಲಿ 643 ರಲ್ಲಿ 642 ಎಂದು ನಮೂದಿಸಿದ್ದು ಅದಕ್ಕೆ ವೈಟನರ್ ಹಾಕಿಲ್ಲ ಎಂದರೆ ಸರಿ. ನಿಡಿ 19 ರಲ್ಲಿ B-643 ರ ಹಿಂದೆ ಏನು ಬರೆದಿಲ್ಲ ಎಂದರೆ ಸರಿ. ನೀವುಹಾಜರುಪಡಿಸಿದ ಆಸ್ತಿ ತೆರಿಗೆ ರಜಿಸ್ಟರ ದೃಢಿಕೃತ ಪ್ರತಿಯಲ್ಲಿ B-643 ರ ಹಿಂದೆ B-642 ಎಂದು ಬರೆಯಲಾಗಿದೆ ಎಂದರೆ ಸರಿ. ನಿಡಿ 22 ಅನ್ನು ನಿಮ್ಮ ಇಲಾಖೆಗೆ ಕೊಟ್ಟ ನಂತರ ಮತ್ತು ಈ ದಾವೆ ಚಾಲ್ತಿಯಲ್ಲಿರುವಾಗ ನಿಮ್ಮ ಆಸ್ತಿ ತೆರಿಗೆ ರಜಿಸ್ಟರ ನಲ್ಲಿ ಈ ರೀತಿ ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ. ಆಸ್ತಿ ತೆರಿಗೆ ರಜಿಸ್ಟರ ನಿಮ್ಮ ತಾಬಾದಲ್ಲಿ ಇರುತ್ತವೆ ಬೇರೆಯವರಿಗೆ ಸಿಗುವುದಿಲ್ಲ ಎಂದರೆ ಸರಿ. ಆಸ್ತಿ ತೆರಿಗೆ ರಜಿಸ್ಟರ ಅನ್ನು ಯಾರು ತಿದ್ದುಪಡಿ ಮಾಡಿರಬಹುದು ಎಂದರೆ ಸಾಕ್ಷಿ ನಾನು ಕರ್ತವ್ಯ ವಹಿಸಿಕೊಳ್ಳುವ ಮೊದಲೇ ತಿದ್ದುಪಡಿ ಆಗಿದ್ದರಿಂದ ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ವಾದಿ ಮತ್ತು ಅವರ ಮಗ ಅಬ್ದುಲ್ ರಫೀಕ್ ಮತ್ತು ಬಸರಿಕಟ್ಟಿ ರವರಿಗೆ ಅನುಕೂಲ ಮಾಡಿ ಕೊಡಲು ರಜಿಸ್ಟರ ಅನ್ನು ನಿಮ್ಮ ಇಲಾಖೆಯವರು ತಿದ್ದಿರುತ್ತೀರಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ 30 ರಲ್ಲಿ ಇರುವ ಸಹಿ ಯಾರದ್ದು ಎಂದರೆ ಸಾಕ್ಷಿ ಅಶೋಕ ಕುಮಾರ ಆಯ್ ಸಾಳೆನ್ನವರ, ಅವರು ಈಗಲೂ ಇಲಾಖೆಯಲ್ಲಿ ಇದ್ದಾರೆ. ನಿಪಿ 30 ರಲ್ಲಿ ವಾದಿಯ ಹೆಸರನ್ನು ಮಾತ್ರ ಬರೆದಿದ್ದು, ಪ್ರತಿವಾದಿಯ ಹೆಸರನ್ನು ಬರೆದಿಲ್ಲ ಎಂದರೆ ಸರಿ. ನಿಮ್ಮ ಪುರಸಭೆಯ ಮುಖ್ಯಾಧಿಕಾರಿ ತಾವೆ ಸ್ವತಃ ಬಂದರೆ ಸಿಕ್ಕಿಹಾಕಿಕೊಳ್ಳುತ್ತಾರೆ ಎಂದು ನಿಮ್ಮನ್ನು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ.)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾದಂ., ಹಳಿಯಾಳ.